ಮೂಲ ದಾವಾ ಸಂಖ್ಯೆ. 120/2021 ಪಿ ಡಬ್ಲ್ಯೂ 1

(ದಿನಾಂಕ 07-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಯು ಕೆ ವಕೀಲರಿಂದಃ-

ನಾನು ಬಿ ಎ ಪಧವೀದರನಾಗಿರುತ್ತೇನೆ. ನಾನು ಮುನಿರಾಬಾದ್ ನಲ್ಲಿ ತೋಟಗಾರಿಕಾ ಮಹಾವಿದ್ಯಾಲಯದಲ್ಲಿ ಕೆಲಸ ಮಾಡುತ್ತೇನೆ. ನಾನು ಕಳೆದ 23 ವರ್ಷಗಳಿಂದ ತೋಟಗಾರಿಕಾ ಮಹಾವಿದ್ಯಾಲಯದಲ್ಲಿ ಕೆಲಸ ಮಾಡುತ್ತಿದ್ದೇನೆ. ನಾನು ಈಗ ಮುನಿರಾಬಾದ್ ನಲ್ಲಿ ವಾಸವಾಗಿರುತ್ತೇನೆ. ನಾನು ಜುಲೈ 2015 ರಿಂದ ಅಲ್ಲಿ ವಾಸವಾಗಿರುತ್ತೇನೆ. ಅದಕ್ಕಿಂತ ಪೂರ್ವದಲ್ಲಿ ನಾನು ಬೆಳಗಾವಿ ಜಿಲ್ಲಾ ಗೋಕಾಕಿನಲ್ಲಿ ವಾಸವಾಗಿದ್ದೆ.

ಈ ದಾವಾಸ್ತಿಗಳ ಸರ್ವೆ ನಂ. 175, 3.33 ಎಕರೆ ಇದು ಕೋಗಳಿ ಹೋಬಳಿಯಲ್ಲಿದೆ, ಸರ್ವೆ ನಂ.106, 1.71 ಎಕರೆ ಇದೆ. ದಾವಾಯಲ್ಲಿ 2 ಮನೆ ಸಹಾ ಇವೆ ಅದರ ನಂ.191 ಮತ್ತು 192 ಇರುತ್ತದೆ. ದಾವಾ 1ನೇ ಆಸ್ತಿಯ ಸರ್ವೆ ನಂ.175 ರ ಚಕ್ಕುಬಂದಿ ಪೂಃ ಮಾಲವಿ ರಸ್ತೆ, ಪಃ ನೆಲ್ಲುಕುದುರಿಗೆ ಹೋಗುವ ರಸ್ತೆ, ಉಃ ಭೀಮಾನಾಯ್ಕ ಇವರ ಆಸ್ತಿ ಹಾಗೂ ದಃಪಿರ್ಯಾನಾಯ್ಕ ಇವರ ಆಸ್ತಿ ಇರುತ್ತದೆ. ದಾವಾ 2 ನೇ ಆಸ್ತಿ ಸರ್ವೆ ನಂ.106 ರ ಚಕ್ಕುಬಂದಿ ಪೂಃ ಉಮಾಪತಿ ಇವರ ಜಮೀನು, ಪಃಯಮುನಾನಾಯ್ಕ ಇವರ ಆಸ್ತಿ, ಉಃಪೂಜಾರಿ ಲೋಕ್ಯಾನಾಯ್ಕ ಇವರ ಆಸ್ತಿ ಹಾಗೂ ದಃಅಜ್ಜಮ್ಮದೇವಿ ದೇವಸ್ಥಾನ ಇದೆ. ಮನೆ ನಂ.191 ರ ವಿಸ್ತೀರ್ಣ ಪೂ-ಪಃ29 ಹಾಗೂ ಉ-ದಃ 31 ಇರುತ್ತದೆ ಇದರ ಪೂಃ ರಸ್ತೆ, ಪಃ ರತ್ನಾನಾಯ್ಕ ಬಿನ್ ಸ್ವಾಮ್ಯನಾಯ್ಕ ಇವರ ಮನೆ, ದಃತೇಜ್ಯಾನಾಯ್ಕ ಬಿನ್ ರೇಖ್ಯಾನಾಯ್ಕ ಇವರ ಮನೆ ಹಾಗೂ ಉಃ ರಸ್ತೆ ಇರುತ್ತದೆ. ಮನೆ ನಂ.192 ರ ವಿಸ್ತೀರ್ಣ ಮನೆ ನಂ.191 ರ ವಿಸ್ತೀರ್ಣದಷ್ಟೇ ಇರುತ್ತದೆ ಅದರ ಚಕ್ಕುಬಂದಿ ಸಹಾ ಅದೇ ಇರುತ್ತದೆ. ದಾವಾ 1ನೇ ಆಸ್ತಿ ಸರ್ವೆ ನಂ.175 ಇದು ನಮ್ಮ ತಂದೆಯವರಿಗೆ ಸಂಬಂಧಿಸಿದ್ದು ಇರುತ್ತದೆ. ಸರ್ವೆ ನಂ.175 ಒಟ್ಟು 9.10 ಎಕರೆ ಎಂದರೆ ಸರಿ. ಸದರಿ ವಿಸ್ತೀರ್ಣದಲ್ಲಿ ನಮ್ಮ ತಂದೆಯವರಿಗೆ 3.33 ಎಕರೆ ಜಮೀನು ಇದೆ ಅದು ನಮ್ಮ ತಂದೆಯವರಿಗೆ ಯಾರಿಂದ ಬಂತು ಎಂದು ನನಗೆ ಗೊತ್ತಿಲ್ಲ ಆದರೆ ಅದು ಪಿತ್ರಾರ್ಜಿತ ಆಸ್ತಿ ಇರುತ್ತದೆ. ದಾವಾ ಶೆಡ್ಯೂಲಿನಲ್ಲಿ ಸರ್ವೆ ನಂ.175 ರ ವಿಸ್ತೀರ್ಣ 3.83 ಬರೆದಿದ್ದು ಇದೆ ಎಂದರೆ ಸಾಕ್ಷಿಯು ತಪ್ಪು ನಮೂದಾಗಿದೆ ಎನ್ನುತ್ತಾರೆ. ನಮ್ಮ ತಂದೆಯವರಿಗೆ ಸದರಿ ಆಸ್ತಿಯು ಯಾರಿಂದ ಹೇಗೆ ಬಂತು ಎನ್ನುವುದು ನನಗೆ ಗೊತ್ತಿಲ್ಲ.

ದಾವಾ 2 ನೇ ಆಸ್ತಿ ಸರ್ವೆ ನಂ.106 ನೇದ್ದನ್ನು 1 ನೇ ಪ್ರತಿವಾದಿಯ ಗಂಡ ಸಕ್ರಾನಾಯ್ಕ ಇವರು ಯಮುನಪ್ಪ ಯಾನೆ ಯಮುನಾ ನಾಯ್ಕ ಬಿನ್ ಗೋವಿಂದನಾಯ್ಕ ಇವರಿಂದ ದಿಃ06-05-1991 ರಂದು ರೂ.11 ಸಾವಿರಗಳಿಗೆ ಖರೀದಿಸಿರುತ್ತಾರೆಂದರೆ ಸರಿ ಸಾಕ್ಷಿ ಮುಂದುವರೆದು

ಅದನ್ನು ನಾವು ಕೂಡು ಕುಟುಂಬದಿಂದ ಖರೀದಿ ಮಾಡಿದ್ದೇವೆನ್ನುತ್ತಾರೆ. ಸಾಕ್ಷಿಗೆ ಮೂಲ ಖರೀದಿ ಪತ್ರ ತೋರಿಸಲಾಗಿ ಸಾಕ್ಷಿಯು ಅದನ್ನು ನೋಡಿ ನಾವೆಲ್ಲರೂ ಕೂಡಿದ್ದಾಗ ಸದರಿ ಜಮೀನು ಖರೀದಿಸಿದ್ದೇವೆನ್ನುತ್ತಾರೆ ಆದ್ದರಿಂದ ಸದರಿ ದಾಖಲೆಯನ್ನು ನಿಡಿ-1 ಎಂದು ಗುರುತಿಸಲಾಯಿತು. ಸದರಿ ಆಸ್ತಿಯನ್ನು ನಾವು ಕೂಡಿದ್ದಾಗ ಖರೀದಿಸಿರುತ್ತೇವಂತಾ ನನ್ನ ವಾದಪತ್ರದಲ್ಲಿ ಹೇಳಿರುತ್ತೇನೆ. ನನ್ನ ವಾದಪತ್ರದಲ್ಲಿ ಬರೆದಿರುವ ವಿಚಾರ ನನಗೆ ಗೊತ್ತು. ಆ ರೀತಿ ನಾನು ನನ್ನ ವಾದಪತ್ರದಲ್ಲಿ ನಮೂದಿಸಿಲ್ಲವೆಂದರೆ ಸರಿಯಲ್ಲ. ನಾವು ಜಂಟಿ ಕುಟುಂಬದಿಂದ ಸದರಿ ಆಸ್ತಿಯನ್ನು ಖರೀದಿ ಮಾಡಿರುತ್ತೇವೆ ಅಂತಾ ಹೇಳುತ್ತಿರುವುದು ಸುಳ್ಳು ಎಂದರೆ ಸರಿಯಲ್ಲ. ಜಂಟಿ ಕುಟುಂಬದ ಆದಾಯದಿಂದ ನಾನು ಸದರಿ ಆಸ್ತಿಯನ್ನು ಖರೀದಿಸಿರುತ್ತೇನಂತಾ ನನ್ನ ವಾದಪತ್ರದಲ್ಲಿ ಹೇಳಿ ಬರೆಸಿಲ್ಲವೆಂದರೆ ಸರಿಯಲ್ಲ. ಸದರಿ ಖರೀದಿಪತ್ರದಂತೆ ದಾವಾ 2ನೇ ಆಸ್ತಿಯು ಸಕ್ರಾನಾಯ್ಕ ಇವರ ಹೆಸರಿಗೆ ಹಕ್ಕು ಬದಲಾವಣೆಯಾಯಿತು ಎಂದರೆ ಸರಿ. ಸದರಿಯವರು ಮರಣ ಹೊಂದುವವರೆಗೂ ಸದರಿ ಆಸ್ತಿಯಲ್ಲಿ ಮಾಲೀಕತ್ವದಂತೆ ಕಬ್ಜದಲ್ಲಿದ್ದರು ಎಂದರೆ ಸರಿ. ಸಕ್ರಾನಾಯ್ಕ ಇವರ ಮರಣದ ನಂತರ ಪೌತಿ ವಾರಸು ಮೂಲಕ 1ನೇ ಪ್ರತಿವಾದಿ ತನ್ನ ಹೆಸರಿಗೆ ಖಾತೆಯನ್ನು ಮಾಡಿಸಿಕೊಂಡು ಸ್ವಾಧೀನದಲ್ಲಿರುತ್ತಾಳೆಂದರೆ ಸರಿ. ಸದರಿ ಆಸ್ತಿಯು 1ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಸದರಿ ಆಸ್ತಿಯ ಮೇಲೆ ನಮಗೆ ಯಾವುದೇ ರೀತಿಯ ಹಕ್ಕು ಇಲ್ಲವೆಂದರೆ ಸರಿಯಲ್ಲ.

ನಮ್ಮ ನಡುವೆ ಈಗಾಗಲೇ ಪಾಲುವಿಭಾಗವಾಗಿದೆ. ನಿಪಿ-13 ರಂತೆ ಪಾಲುವಿಭಾಗದ ಪ್ರಕಾರ ಆಸ್ತಿ ನಂ.91 ಇದು 1ನೇ ಪ್ರತಿವಾದಿಯ ಹೆಸರಿಗಿದೆ ಮತ್ತು ಆಸ್ತಿ ನಂ.92 ನನ್ನ ಹೆಸರಿಗೆ ಇದೆ ಎಂದರೆ ಸರಿ. ಸದರಿ ಆಸ್ತಿಗಳಿಗೆ ನಾನು ಮತ್ತು 1ನೇ ಪ್ರತಿವಾದಿ ಕಂದಾಯವನ್ನು ಕಟ್ಟಿರುತ್ತೇವೆಂದರೆ ಸರಿ. ಸದರಿ ಆಸ್ತಿಗಳು ಖಾತೆ ಬದಲಾವಣೆಯಾಗಿ ಆಸ್ತಿ ನಂ.91 ರಲ್ಲಿ 1ನೇ ಪ್ರತಿವಾದಿ ಮತ್ತು ಆಸ್ತಿ ನಂ.92 ರಲ್ಲಿ ನಾನು ಸ್ವಾಧೀನದಲ್ಲಿರುತ್ತೇನೆಂದರೆ ಸರಿ.

ಸರ್ವೆ ನಂ.106ಬಿ ದಲ್ಲಿ 85 ಸೆಂಟ್ಸ ಜಮೀನನ್ನು ಶ್ರೀ ಗುರು ಗೋಪಾಲಸ್ವಾಮಿ ಶಾಂತಿಧಾಮ ಆಶ್ರಮ ಕೋಗಳಿ ತಾಂಡ ಇವರಿಗೆ ಸಕ್ರನಾಯ್ಕ ಇವರಿಗೆ ಕೊಟ್ಟಿರುತ್ತಾರೆ. ಅದರಂತೆ ಸದರಿ ಹೆಸರಿಗೆ ಪಹಣಿ ಬದಲಾವಣೆಯಾಯಿತು ಎಂದರೆ ಸರಿ. ಸರ್ವೆ ನಂ.106 ದಾವಾ 2ನೇ ಆಸ್ತಿ ವಿಸ್ತೀರ್ಣ 2.51 ಎಕರೆ ಜಮೀನಿನಲ್ಲಿ 85 ಸೆಂಟ್ಸ ಜಮೀನನ್ನು ಸದರಿ ಗುರು ಗೋಪಾಲಸ್ವಾಮಿ ಶಾಂತಿಧಾಮ ಆಶ್ರಮ ಕೋಗಳಿ ತಾಂಡ ಇವರಿಗೆ ಸಕ್ರಾನಾಯ್ಕ ಇವರು ಕೊಟ್ಟಿದ್ದು ಇರುತ್ತದೆ.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ